ಮೈ ಬಣ್ಣ ಅಷ್ಟಕ್ಕಷ್ಟೆ. ಅದೇನೇ ಕೆಲಸವಿದ್ದರೂ ಗೋಪಾಲಿಯ ತಾಯಿ ಮಗುವಿಗೆ ತಲೆ ಬಾಚಿ ಜಡೆ ಕಟ್ಟಿ ಕಾಲಿಗೆ ಗೊಲಸು ತೊಡಿಸಿ, ಕೈಗೆ ಗಿಲಕಿ ಕೊಟ್ಟು ಎಂತದೋ ಹಾಡು ಹಾಡುತ್ತಿದ್ದಳು. ಕಪಿನಿಪತಿರಾಯರಿಗೆ ದಿನವಿಡೀ ಅದನ್ನು ಎತ್ತಿಕೊಂಡು ತಿರುಗುವುದೇ ಕೆಲಸ. ಒಂದು ಬಡವರ ಮನೆಯ ಹೆಣ್ಣು ಮಗು ದತ್ತಕಕ್ಕೆ ಬಂದು ಆ ಮನೆಗೆ ತುಂಬು ಸಂತೋಷ ತಂದಿತ್ತು. "ಖುಷಿ" ಅನ್ನದೆ ಜ್ಯೋತಿ ಮತ್ತು ಗೋಪಾಲಿ ಮನೆಯೊಳಕ್ಕೆ ಕಾಲೇ ಇಡುತ್ತಿರಲಿಲ್ಲ. ಅಷ್ಟಿಷ್ಟು ಹಣ ಉಳಿಸಿ ಇಬ್ಬರೂ ಖುಷಿಗೆ ಚೂರುಪಾರು ಬಂಗಾರ ಸೇರಿಸಿಡುತ್ತಿದ್ದರು. ಬಟ್ಟೆ ತರುತ್ತಿದ್ದರು. ಇತ್ತೀಚೆಗೆ ಟಾಯವಾಕ ಬಿಟ್ಟು ಲೈನ್ ಬಜಾರ್‌ಗೆ ವಾಕಿಂಗ್ ಹೋಗುತ್ತಿದ್ದರು. ಖುಷಿಗೆ ಪೇಡೆ ತಿನ್ನಿಸುತ್ತಿದ್ದರು. ಜ್ಯೋತಿ ಸಿಹಿ ತಿನ್ನುವಂತಿರಲಿಲ್ಲ. ಗೋಪಾಲಿ ಅಕ್ಕರೆಯಿಂದ ಪೇಡೆ ತಿನ್ನಿಸುತ್ತಿದ್ದ. ಧಾರವಾಡದ ಆಗಸದಿಂದ ಮೊಟ್ಟ ಮೊದಲ ಮಳೆ ಹನಿ ಜಾರಿ ಕೆಂಪು ಮಣ್ಣು ಘಮ್ಮೆಂದ ದಿನ ದಂಪತಿ ಖುಷಿ ಅನ್ನುತ್ತಲೇ ಮನೆಯೊಳಕ್ಕೆ ಬಂದರೆ ಎಲ್ಲಿದೆ ಖುಷಿ?

"ಆ ರಂಡೇ ಮಕ್ಕಳು ಬಂದು ಒಯ್ದು ಬಿಟ್ಟರು" ಅಂದಳು ಗೋಪಾಲಿಯ ತಾಯಿ. ಕೊಡುವಾಗಲೇನೋ ದುಡ್ಡಿನ ಆಸೆಗಾಗಿ ಮಗುವನ್ನು ಕೊಟ್ಟಿದ್ದರು. ಆದರೆ ಹೆತ್ತ ಕರುಳು. ಕೆಲವೇ ದಿನ ಕಳೆಯುವುದರೊಳಗಾಗಿ ಜೀವ ಜಗ್ಗಿದಂತಾಗಿ ನುಗ್ಗಿಕೇರಿ ಹಣುಮಪ್ಪನ ಮನೆಯ ಹತ್ತಿರದ ಆ ಬಡವರು ಬಂದು ಹಟಕ್ಕೆ ಬಿದ್ದು ಹೆಣ್ಣು ಮಗುವನ್ನು ಅದರ ದಾಗೀನದ ಸಮೇತ ಒಯ್ದು ಬಿಟ್ಟಿದ್ದರು. ಗೋಪಾಲಿ ಹೋಗಿ ಏನು ಗೋಗರೆದರೂ ಅವರು ಮಗುವನ್ನು ಹಿಂತಿರುಗಿಸಲು ಒಪ್ಪಲಿಲ್ಲ. ಜ್ಯೋತಿ ಬೋರಲು ಮಲಗಿಬಿಟ್ಟಳು. ಅವಳಿಗೆ ಜಗತ್ತು ಬೇಡವೆನಿಸಿತ್ತು. ಹೆರಲಿಕ್ಕಂತೂ ಆಗಲಿಲ್ಲ, ಸಾಕಲಿಕ್ಕೂ ಇಲ್ಲವೇ? ಏನು ಕರ್ಮ ತನ್ನದು. ಡಯಾಬಿಟೀಸು ಹೇಗಿದೆ ಎಂದು ನೋಡಿಕೊಳ್ಳಲು ಕೂಡ ಹೋಗಲಿಲ್ಲ. ಅವಳಿಗಿನ್ನು ಬದುಕುವುದೇ ಬೇಡವೆನ್ನಿಸಿ ಬಿಟ್ಟಿತ್ತು. ಆದರೆ ನಸೀಬು ಪ್ರತಿ ಸಲವೂ ಖೊಟ್ಟಿ ಆಗಿರುವುದಿಲ್ಲ. ಇದ್ದಕ್ಕಿದ್ದಂತೆ ಒಮ್ಮೆ ಮನೆಗೆ ಫೌಜ್‌ದಾರ ರವಿ ನಾಯಿಕೋಡಿ ಬಂದರು. ಅವನು ಬಾಲ್ಯ ಸ್ನೇಹಿತ. "ಯೇ, ಗೋಪಾಲಿ ನಿನ್ನೆ ರಾತ್ರಿ ಗಸ್ತು ತಿರುಗುವಾಗ ಒಂದು ಕೂಸು ಸಿಕ್ಕಾದೇ ನೋಡು. ಗಂಡು ಕೂಸು. ಕೂಸು ಲಟ್ಟ ಲಟ್ಟ ಅದ. ಈ ಸಲ ಎಲ್ಲ ಕಾನೂನು ಪ್ರಕಾರ ಮಾಡಿ ದತ್ತಕಕ್ಕೆ ತಗೊಂಡು ಬಿಡು" ಅಂದಿದ್ದ. ಖುಷಿ ಬಿಟ್ಟು ಹೋದ ಸಂತಸ ಅದೇ ಮನೆಯೊಳಕ್ಕೆ ತೇಜು ಆಗಿ ಹಿಂತಿರುಗಿತ್ತು.

ಆದರೆ ಜ್ಯೋತಿಗೆ ಏನೋ ಭಯ. ಮತ್ತೆ ಯಾರೋ ಬಂದು ಒಯ್ದು ಬಿಟ್ರೆ? ಬಸ್‌ಸ್ಟ್ಯಾಂಡಿನಲ್ಲಿ ಬಿಟ್ಟು ಹೋದ ಕೂಸು ಅದರ ತಂದೆ ತಾಯಿಗೆ ತಮ್ಮ ಮಗು ಯಾರ ಮನೆಗೆ ಸೇರಿತೆಂಬುದೇ ಗೊತ್ತಿರಲಿಲ್ಲ. ಹೀಗಾಗಿ ನಿರುಮ್ಮಳ. ಗಂಡು ಮಗು ಬಂದ ಮೇಲೆ ಗೋಪಾಲಿಯ ತಾಯಿಗೆ ಸೊಸೆ ಮೇಲೆ ಕೊಂಚ ಮೃದು ಭಾವ ಬೆಳೆದಿತ್ತು. ಗೋಪಾಲಿಯ ತಂಗಿಯರು ಬಂದಾಗಲೆಲ್ಲ ಅಕ್ಕರೆಯಿಂದ ಎತ್ತಿಕೊಳ್ಳುತ್ತಿದ್ದರು. ಅದರಲ್ಲೂ ಚಿಕ್ಕ ತಂಗಿ ಕಮಲ ಮಗುವನ್ನು ತುಂಬಾ ಮುದ್ದು ಮಾಡುತ್ತಿದ್ದಳು. ಅದಕ್ಕೇನು ಲಂಗವೇ? ಗಿಲಕಿಯೇ? ಬಂದಾಗೊಮ್ಮೆ ಚೊಣ್ಣ, ಅಂಗಿ ಹಿಡಿದುಕೊಂಡು ಬಂದರೆ ಸಾಕು. ಜ್ಯೋತಿಗೆ ಹೊಟ್ಟೆಕಿಚ್ಚಾಗುವಷ್ಟು ಅವಳು ಪ್ರೀತಿಸುತ್ತಿದ್ದಳು. ಗೋಪಾಲಿ ದಂಪತಿ ಎಂದಿನಂತೆ ತೇಜುವನ್ನು ಅವುಚಿಕೊಂಡು ಲೈನ್ ಬಜಾರ್‌ಗೆ ವಾಕಿಂಗ್ ಹೋಗುತ್ತಿದ್ದರು. ಜ್ಯೋತಿ ತನ್ನ ಡಯಾಬಿಟೀಸು ಕೇರೇ ಮಾಡುತ್ತಿರಲಿಲ್ಲ. ಅವಳ ಪ್ರಪಂಚವಿಡೀ ಆ ಲಟ್ಟ ಲಟ್ಟ ಮಗುವಿನ ಸುತ್ತ ಗಿರಕಿ ಹೊಡೆಯುತ್ತಿತ್ತು. ಯಾವಾಗಲೋ ಒಮ್ಮೆ ಗೋಪಾಲಿಯಲ್ಲಿ ಪುರುಷ ಕಾಮ ಕೆರಳುತ್ತಿತ್ತು. ಜ್ಯೋತಿ ಹೊಸ ಹೊಸ ಹಾಡು ಕಲಿತಳು. "ಬಾರ ಚಂದ್ರಮ ನನ್ನಾಸೆ ತೀರ ಬಾರ." ಖುಷಿ ಬಿಟ್ಟು ಹೋದ ಸಂತಸವೆಲ್ಲ ಮತ್ತೆ ಮನೆಗೆ ಬಂದು ದಾಖಲಾಗಿತ್ತು.